ದಿನಾಂಕಃ 02-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದಃ

1. ಸುಮಾರು 15 ವರ್ಷಗಳ ಹಿಂದೆ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಗುಬ್ಬಿ ನ್ಯಾಯಲಯಾದಲ್ಲಿ ಎಲ್.ಎ.ಸಿ. ಪ್ರಕರಣ ದಾಖಲಿಸಿದ್ದ ಬಗ್ಗೆ ನನಗೆ ಗೊತ್ತು. ಸದರಿ ಪ್ರಕರಣವು ನಮ್ಮ ಜಮೀನು ಭೂಸ್ವಾಧೀನ ಪಡಿಸಿಕೊಂಡಿದ್ದ ಬಗ್ಗೆ ಹಾಕಿದ್ದರು. ಆ ಬಗ್ಗೆ ಪರಿಹಾರದ ಮೊತ್ತವನ್ನು ನನ್ನ ತಂದೆ ಸ್ವೀಕರಿಸಿರುತ್ತಾರೆ ಎಂದರೆ ಸರಿ. ಪರಿಹಾರದ ಮೊತ್ತ ಪಡೆದುಕೊಂಡ ನಂತರ ಪರಿಹಾರ ಸಾಕಾಗುವುದಿಲ್ಲ ಎಂದು ಗುಬ್ಬಿ ನ್ಯಾಯಲಯಾಲಕ್ಕೆ ನನ್ನ ತಂದೆ ಎಲ್.ಎ.ಸಿ.257/2006 ರಂತೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ದಿನಾಂಕಃ 16-04-2008 ರಂದು ಇತ್ಯರ್ಥವಾಗಿ ಪರಿಹಾರದ ಮೊತ್ತವನ್ನು ಹೆಚ್ಚಿಸಿರುತ್ತದೆ ಎಂದರೆ ಸರಿ . ಹೆಚ್ಚುವರಿ ಪರಿಹಾರದ ಮೊತ್ತವನ್ನು ನನ್ನ ತಂದೆ ಪಡೆದುಕೊಂಡಿರುತ್ತಾರೆ. ಆ ವಿಚಾರ ನಮ್ಮ ಗಮನದಲ್ಲಿ ಇರುತ್ತದೆ ಎಂದರೆ ಸರಿ.

2. ನಾನು ಅವಿದ್ಯಾವಂತ. ನನಗೆ ಸಾಮಾನ್ಯ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸಾಕ್ಷಿಯು ವ್ಯವಹಾರ ಮಾಡುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಹೆಚ್ಚಿನ ಪರಿಹಾರ ಪಡೆದು ಕೊಂಡಿದ್ದರೂ ಸಹ ದುರದ್ದೇಶದಿಂದ ಇನ್ನು ಹೆಚ್ಚಿನ ಪರಿಹಾರ ಪಡೆದು ಕೊಳ್ಳಲು ಈ ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಇರುವಂತಹ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

3. ನನಗೆ ಕೋವೀಡ್ ಖಾಯಿಲೆ ಬಂದಿತ್ತು. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. 2008 ರಿಂದ 2019 ರವರೆಗೆ ನಾನು ಮೇಲ್ಮನವಿಯನ್ನು ಸಲ್ಲಿಸಲು ವಕೀಲರನ್ನು ಬೇಟಿಯಾಗಿರುವುದಿಲ್ಲ. 2022 ರಲ್ಲಿ ಈ ಅರ್ಜಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸುಮಾರು 15 ವರ್ಷಗಳ ವಿಳಂಬವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಹೇಳಿರುವಂತಹ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ. ಮತ್ತು ವಾಸ್ತಾವಾಂಶಕ್ಕೆ ದೂರವಾಗಿರುತ್ತವೆ ಎಂದರೆ

ಸರಿಯಲ್ಲ. ಎರಡನೇ ಸುತ್ತಿಗೆ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಕಾಲವಿಳಂಬವನ್ನು ಮನ್ನ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

**ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.**

**6 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು.**

ಸಾಕ್ಷಿಯ ಸಹಿ